OS 65/2020 (PW-1)

ದಿನಾಂಕಃ 24-06-2025

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ 1 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ RND ಮಾನ್ಯ ವಕೀಲರಿಂದಃ**

ಸದರಿ ಬಸಣ್ಣ ಇವರು ತೀರಿಕೊಂಡ ನಂತರ ಸದರಿ ದಾವಾ ಸ್ವತ್ತುಗಳಿಗಾದಂತೆ ಪ್ರತಿವಾದಿಗಳ ಹೆಸರಿಗೆ ಮ್ಯುಟೇಶನ್ ಆಗಿರುತ್ತವೆ ಎಂದರೆ ಸರಿ. ಸಾಕ್ಷಿಗೆ ಈಗ ಸದರಿ ಮ್ಯುಟೇಶನ ಆಗುವ ಸಂದರ್ಭದಲ್ಲಿ ನೀವು ಸದರಿ ಬಸಪ್ಪ ಇವರ ಮಗಳು ಎಂದು ಹೇಳಿ ಅದಕ್ಕೆ ತಕರಾರು ಹಾಕಿರುತ್ತೀರಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ಪ್ರತಿವಾದಿಗಳು ತಮಗೆ ಕೇಳದೇ ಸದರಿ ಮ್ಯುಟೇಶನ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಮ್ಯುಟೇಶನ ಆಗಿರುವ ವಿಚಾರ ನನಗೆ ಗೊತ್ತಾಗಿ ಇವತ್ತಿಗೆ 5 ವರ್ಷಗಳಾಗಿರುತ್ತವೆ.

2. ನಾನು ಈಗ ಸಗರ ಗ್ರಾಮದಲ್ಲಿ ವಾಸವಾಗಿರುತ್ತೇನೆ. 1 ನೇ ವಾದಿ ನನ್ನ ಜೊತೆಗೆ ವಾಸ ಮಾಡುತ್ತಿದ್ದಾರೆ. 2 ನೇ ವಾದಿಯು ಈಗ ದೇವಾಪೂರ ಗ್ರಾಮದಲ್ಲಿ ವಾಸ ಮಾಡುತ್ತಾರೆ. ಸದರಿ 2 ನೇ ವಾದಿಯು ನನ್ನ ಮನೆಗೆ ಹೋಗಿ ಬಂದು ಮಾಡುತ್ತಾರೆ.

3. ಸದರಿ ಬಸಣ್ಣ ಇವರ ಅಣ್ಣನ ಹೆಂಡತಿ ಹೆಸರು ಶ್ರೀಮತಿ ಸಿದ್ದಲಿಂಗಮ್ಮ ಎಂದರೆ ಸರಿ. ಸದರಿ ಸಿದಲಿಂಗಮ್ಮ ಇವರಿಗೆ ಸ್ವಂತ ಮಕ್ಕಳು ಇರಲಿಲ್ಲ ಎಂದರೆ ಸರಿ. ಸದರಿ ಸಿದ್ದಲಿಂಗಮ್ಮ ಇವರು 19-20 ವರ್ಷಗಳ ಹಿಂದೆ ಕಾಲವಾಗಿರುತ್ತಾರೆ. ಸದರಿ ಸಿದ್ದಲಿಂಗಮ್ಮ ಇವರು ತೀರಿಕೊಂಡ ನಂತರ ಅವರಿಗೆ ಸ್ವಂತ ಮಕ್ಕಳು ಇರದ ಕಾರಣ ಅವರ ಸ್ವತ್ತುಗಳು ಪ್ರತಿವಾದಿಗಳ ಹೆಸರಿನಲ್ಲಿ ಆಗಿರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಗಳು ಸದರಿ ಸ್ವತ್ತುಗಳಿಗ ತಮ್ಮ ಹೆಸರಿನಲ್ಲಿ ತಮಗೆ ಗೊತ್ತಿರದ ಹಾಗೆ ಮಾಡಿಕೊಂಡಿರುವುದಾಗಿ ಹೇಳುತ್ತಾರೆ. ಈಗ್ಗೆ 6-7 ವರ್ಷಗಳ ಹಿಂದೆ ನಾನು ಪ್ರತಿವಾದಿಗಳು ಸದರಿ ಸಿದ್ದಲಿಂಗಮ್ಮ ಇವರ ಸ್ವತ್ತುಗಳಿದಾಂತೆ ತಮ್ಮ ಹೆಸರುಗಳನ್ನು ಮಾಡಿಕೊಂಡಿರುವುದಕ್ಕೆ ಉತಾರಗಳು ನೋಡಿರುತ್ತೇನೆ.

4. ಸದರಿ ಬಸಣ್ಣ ಮತ್ತು ಸಿದ್ದಲಿಂಗಮ್ಮ ಇವರುಗಳು ತೀರಿಕೊಂಡ ನಂತರ ನಾವು ವಾದಿಗಳು ಸದರಿ ಬಸಣ್ಣ ಇವರ ಹೆಂಡತಿ ಮತ್ತು ಮಕ್ಕಳಾಗಿರುತ್ತವೇ ಎಂದು ಹೇಳಿ ದಾವಾ ಸ್ವತ್ತುಗಳಿದಾಂತೆ ನಮ್ಮ ಹೆಸರನ್ನು ಮಾಡಲು ನಾವು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಸಾಕ್ಷಿಗೆ ಈಗ ನೀವು ಹಾಗೂ 1 ಮತ್ತು 2 ನೇ ವಾದಿಗಳು ದಾವಾ ಸ್ವತ್ತಿಗೆ ಯಾವುದೇ ಸಂಬಂದ ಇರದ ಕಾರಣ ಸದರಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದು ಹೇಳಿದ್ದಕ್ಕೆ ಸಾಕ್ಷಿ ಪ್ರತಿವಾದಿಗಳು ತಮಗೆ ತಿಳಿಯದಂತೆ ಸದರಿ ಮ್ಯುಟೇಶನ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ತಾವುಗಳು ಆ ಸಮಯದಲ್ಲಿ ಅನ್ಯೋನ್ಯವಾಗಿದ್ದೇವು ಎಂದು ಹೇಳುತ್ತಾರೆ.

5. ಸದರಿ ಬಸಣ್ಣ ಮತ್ತು ಸಿದ್ದಲಿಂಗಮ್ಮ ಇವರು ತೀರಿಕೊಂಡ ನಂತರ ಪ್ರತಿವಾದಿಗಳ ಹೆಸರುಗಳು ನನ್ನ ಸಮಕ್ಷಮ ದಾವಾ ಸ್ವತ್ತುಗಳಿದಾದಂತೆ ಮ್ಯುಟೇಶನ ಆಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಮ್ಯುಟೇಶನ ಆಗಿರುವ ವಿಚಾರ ನನಗೆ ಗೊತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. 1 ನೇ ವಾದಿಯ ಜನ್ಮ ದಿನಾಂಕ ನನಗೆ ಗೊತ್ತಿರುವುದಿಲ್ಲ. ನಿಪಿ.18 ನ್ನು ತೆಗೆದುಕೊಳ್ಳುವ ಮುಂಚಿತವಾಗಿ ಸಂಬಂಧಪಟ್ಟ ಅಧಿಕಾರಿಗಳು ಪ್ರತಿವಾದಿಗಳಿಗೆ ನೋಟಿಸ್ ಕೊಟ್ಟಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ.18 ನ್ನು ತೆಗೆದುಕೊಳ್ಳುವ ಮುಂಚಿತವಾಗಿ ನಾನು ಪ್ರತಿವಾದಿಗಳಿಗೆ ಯಾವುದೇ ತಿಳುವಳಿಕೆ ಪತ್ರವನ್ನು ಜಾರಿ ಮಾಡಿರುವುದಿಲ್ಲ. ನಿಪಿ.18 ರಲ್ಲಿ 1 ನೇ ಪ್ರತಿವಾದಿಯ ಹೆಸರು ನಮೂದು ಇರುವುದಿಲ್ಲ. ನಿಪಿ.18 ನ್ನು ತೆಗೆದುಕೊಳ್ಳುವ ಮುಂಚಿತವಾಗಿ ನಾನು ತಹಶೀಲ್ದಾರ ಕಚೇರಿಗೆ ನನ್ನ ಒಂದು Affidavit ನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಸರಿ affidavit ನ್ನು ಕೊಟ್ಟ ಅಧಾರದ ಮೇಲೆ ತಹಶೀಲ್ದಾರವರು ನಿಪಿ.18 ನ್ನು ಕೊಟ್ಟಿರುತ್ತಾರೆ ಹಾಗೂ ಅವರು ಸ್ಥಾನಿಕ ಚೌಕಾಶಿಯನ್ನು ಮಾಡಿರುವುದಿಲ್ಲ ಎಂದರೆ ಸರಿ. ನನ್ನ Affidavit ನಲ್ಲಿ ನಾನು 1 ನೇ ಪ್ರತಿವಾದಿಯ ಹೆಸರನ್ನು ಉಲ್ಲೇಖ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ಬಸಣ್ಣ ಇವರ ಎರಡನೇ ಹೆಂಡತಿಯಾಗಿದ್ದರಿಂದ Affidavit ನಲ್ಲಿ ಅವರ ಹೆಸರನ್ನು ಉಲ್ಲೇಖ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಸದರಿ ಬಸಣ್ಣ ಇವರ ಮೊದಲನೇ ಹೆಂಡತಿಯಾಗಿದ್ದರಿಂದ ನಾನು ತಹಶೀಲ್ದಾರ ಇವರ ಜೊತೆಗೆ ಶಾಮಿಲಾಗಿ ನಿಪಿ.18 ರಂತೆ ಸುಳ್ಳಾದ ದಾಖಲೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ವಯಸ್ಸು ಜಾಸ್ತಿಯಿದ್ದು ಅದರ ಬಗ್ಗೆ ನನ್ನ Affidavit ನಲ್ಲಿ ನಮೂದು ಮಾಡಿದರೆ ಅವರೆ ಸದರಿ ಬಸಣ್ಣ ಇವರ ಮೊದಲ ಹೆಂಡತಿಯಾಗಿರುತ್ತಾರೆ ಎಂದು ತಿಳಿದು ಬರುತ್ತದೆ ಎಂದು ಹೇಳಿ ಅವರ ಹೆಸರನ್ನು ನಾನು ನನ್ನ Affidavit ನಲ್ಲಿ ನಮೂದಿಸದೇ ನಿಪಿ.18 ನ್ನು ಸುಳ್ಳಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

7. ನನಗೆ 1 ನೇ ಪ್ರತಿವಾದಿಯ ಜನ್ಮ ದಿನಾಂಕ ಗೊತ್ತಿರುವುದಿಲ್ಲ. ನನ್ನ ಹಾಗೂ 2 ನೇ ವಾದಿಯ ಜನ್ಮ ದಿನಾಂಕಗಳು ನನಗೆ ಗೊತ್ತಿರುವುದಿಲ್ಲ. ನನ್ನ ಹಾಗೂ 1 ಮತ್ತು 2 ನೇ ವಾದಿಗಳ ವಯಸ್ಸನ್ನು ತೋರಿಸಲು ನಾನು ಪ್ರಸ್ತುತ ಪ್ರಕರಣದಲ್ಲಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದು ಹೇಳುತ್ತಾರೆ.

8. ನನ್ನ ಹಾಗೂ 1 ಮತ್ತು 2 ನೇ ವಾದಿಯ ವಯಸ್ಸು ಕಡಿಮೆ ಇದ್ದರೂ ಕೂಡ ಸದರಿ ಬಸಣ್ಣ ಇವರ ಮೊದಲನೇ ಹೆಂಡತಿ ಹಾಗೂ ಅವರ ಮಕ್ಕಳು ಎಂದು ತೋರಿಸಲು ನಮ್ಮ ವಾದ ಪತ್ರದಲ್ಲಿ ನಮ್ಮ ವಯಸ್ಸನ್ನು ಕಡಿಮೆ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಹಾಗೂ 1 ಮತ್ತು 2 ನೇ ವಾದಿಗಳ

ವಯಸ್ಸನ್ನು ತೋರಿಸಲು ನಮ್ಮ ಹತ್ತಿರ ದಾಖಲೆಗಳು ಇದ್ದರೂ ಕೂಡ ಸತ್ಯಾಂಶವನ್ನು ಮರೆಮಾಚಲು ಅವುಗಳನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ 1 ರಿಂದ 4 ನೇ ಪ್ರತಿವಾದಿಗಳ ಪರ ಮಾನ್ಯ ವಕೀಲರಿಂದ ಮುಂದುವರೆದ ಪಾಟಿ ಸವಾಲು ಮಾಡಲು ವೇಳೆ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.